ಕಾರ್ಮಿಕನಿಗೆ ರೂ. 20,000/–ಗಳ ಪರಿಹಾರವನ್ನು ವಸೂಲಿ ಮಾಡಿ ಪ್ರತಿ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಬಾಲಕಾರ್ಮಿಕರ ಪುನರ್ವಸತಿ ಮತ್ತು ಕಲ್ಯಾಣ ನಿಧಿಯಲ್ಲಿ ಠೇವಣಿ ಮಾಡಲಾಗುತ್ತಿದೆ.

12. ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಸಂದರ್ಭಕ್ಕನುಗುಣವಾಗಿ ಕುಟುಂಬದ ಓರ್ವ ಸದಸ್ಯನಿಗೆ ಉದ್ಯೋಗವನ್ನು ಒದಗಿಸಲಾಗುತ್ತಿದೆ.

13. ವಿಶೇಷ ವಸತಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಒ) ಸಹಯೋಗದೊಂದಿಗೆ "ಅರಳು ಮಲ್ಲಿಗೆ ಎಂಬ ವಿಶೇಷ ಪಠ್ಯ ಕ್ರಮವನ್ನು ತಯಾರಿಸಲಾಗಿದ್ದು, ಜೀವನ ಕೌಶಲ್ಯದ ಬಗ್ಗೆಯೂ ಸಹ ತಿಳಿವಳಿಕೆ ನೀಡಲಾಗುತ್ತಿದೆ.

(ಇ) ಕಾರ್ಪಸ್ ನಿಧಿ ಬಳಕೆಯಾಗುತ್ತಿದೆ.

ಅಕ್ರಮ ಸಕ್ರಮ ಕಾನೂನಿನಡಿ ಮಂಜೂರಾತಿ

65 (75) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಅಕ್ರಮ ಸಕ್ರಮ ಕಾನೂನಿನಡಿಯಲ್ಲಿ ಮಂಜೂರಾತಿಗಾಗಿ, ಇಲಾಖಾ ಅಭಿಪ್ರಾಯಕ್ಕಾಗಿ ಸಲ್ಲಿಸಲಾದ ಪ್ರಕರಣಗಳು ಎಷ್ಟು ;

(ಆ) ಇದರಲ್ಲಿ ಸದಾಭಿಪ್ರಾಯ ನೀಡಿದ ಪ್ರಕರಣಗಳೆಷ್ಟು ; ಬಾಕಿ ಉಳಿದ ಪ್ರಕರಣಗಳ ಬಗ್ಗೆ ಕೈಗೊಂಡ ಕ್ರಮಗಳೇನು ? (ಕಾರ್ಕಳ–ಉಡುಪಿ–ಕುಂದಾಪುರ ಈ ಮೂರು ತಾಲ್ಲೂಕಿನ ಸಂಪೂರ್ಣ ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಕ್ರಮ ಸಕ್ರಮ ಕಾನೂನಿನಡಿಯಲ್ಲಿ ಮಂಜೂರಾತಿಗಾಗಿ ಇಲಾಖಾ ಅಭಿಪ್ರಾಯ ಸಲ್ಲಿಸಿದ ಪ್ರಕರಣದ ವರ್ಷವಾರು ವಿವರ ಈ ಕೆಳಗಿನಂತಿದೆ :

ವರ್ಷ	ಒಟ್ಟು ಕಡತಗಳು
2011–12	85 ಸಂಖ್ಯೆ
2012–13	38 ಸಂಖ್ಯೆ
2013–14	41 ಸಂಖ್ಯೆ

(ಆ) ಈ ಪ್ರಕರಣಗಳ ಪೈಕಿ ಮಂಜೂರಾತಿಗೆ ಸದಾಭಿಪ್ರಾಯ ನೀಡಿದ ಪ್ರಕರಣಗಳು ವರ್ಷವಾರು ವಿವರ ಈ ಕೆಳಗಿನಂತಿದೆ.

ವರ್ಷ	ತಾಲ್ಲೂಕು	ನೀಡಬಹುದೆಂದು ಅಭಿಪ್ರಾಯ ನೀಡಿದ ಕಡತಗಳು	ನೀಡಬಾರದೆಂದು ಅಭಿಪ್ರಾಯ ನೀಡಿದ ಕಡತಗಳು	ಬಾಕಿ ಉಳಿದ ಕಡತಗಳು
2011–12	ಕಾರ್ಕಳ	10	38	–
	ಉಡುಪಿ	04	14	–
	ಕುಂದಾಪುರ	03	15	–
	ಒಟ್ಟು	**17**	**67**	–
2012–13	ಕಾರ್ಕಳ	04	06	–
	ಉಡುಪಿ	01	05	–
	ಕುಂದಾಪುರ	03	15	–
	ಒಟ್ಟು	**8**	**26**	–
2013–14	ಕಾರ್ಕಳ	04	11	–
	ಉಡುಪಿ	0	03	–
	ಕುಂದಾಪುರ	01	16	–
	ಒಟ್ಟು	**05**	**30**	–

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59, ಕಾ.ಸೂ. ಓ–089/350 ಪ್ರತಿಗಳು